# ಶ್ರೀಮಾತೆಯವರ ಸ್ಮೃತಿ

ಮೂಲ ಬಂಗಾಳಿ : **ಸುಹಾಸಿನೀ ದೇವಿ** ಅನುವಾದ : **ಸ್ವಾಮಿ ಜ್ಞಾನಯೋಗಾನಂದ**

**ಭಾಗ ೧**

ನನ್ನ ತಾಯಿ ಸುಹಾಸಿನೀ ದೇವಿಯವರು ಶ್ರೀಮಾತೆಯವರನ್ನು 'ಉದ್ಬೋಧನ'ದಲ್ಲಿ ನೋಡಿದ್ದರು. ಶ್ರೀಮಾತೆಯವರು ಭಕ್ತೆಯರೊಡನೆ ಏನೇನು ಮಾತನಾಡುತ್ತಿದ್ದರು, ಹಾಗೂ ನನ್ನ ತಾಯಿಯವರಿಗೂ ಏನೇನು ಹೇಳುತ್ತಿದ್ದರು ಎಲ್ಲವನ್ನೂ ಅವರು ಒಂದು ಪುಸ್ತಕದಲ್ಲಿ ಬರೆದಿಡುತ್ತಿದ್ದರು. ಅವರು ಗೌರಿ-ಮಾ ಹಾಗೂ ಶ್ರೀರಾಮಕೃಷ್ಣರ ಸಂನ್ಯಾಸಿ ಶಿಷ್ಯಂದಿರಲ್ಲಿ ಸ್ವಾಮಿ ಬ್ರಹ್ಮಾನಂದ, ಸ್ವಾಮಿ ಶಾರದಾನಂದ ಹಾಗೂ ಸ್ವಾಮಿ ಅಭೇದಾನಂದರನ್ನು ನೋಡಿದ್ದರು. ಅವರ ಮಾತುಗಳನ್ನೂ ನನ್ನ ತಾಯಿ ತಮ್ಮ ಪುಸ್ತಕದಲ್ಲಿ ಬರೆದಿಟ್ಟಿದ್ದರು. ಒಂದು ದಿನ ಈ ಪುಸ್ತಕವನ್ನು ಸರಳಾದೇವಿ (ಮುಂದೆ ಪ್ರವ್ರಾಜಿಕಾ ಭಾರತೀಪ್ರಾಣಾ) ನೋಡಿದ್ದರು. ಅವರು ಅತ್ಯಂತ ಆನಂದಪಟ್ಟು ಹೇಳಿದ್ದರು: ''ನೀನು ತುಂಬಾ ಒಳ್ಳೆಯ ಕೆಲಸ ಮಾಡಿದೆ. ಮುಂದೊಂದು ದಿನ ಶ್ರೀಮಾತೆ ಕೂಡ ಠಾಕೂರರ ಬಳಿಗೇ ಹೋಗುವರು. ಆಗ ನಾವು ಅವರ ಮಾತುಗಳನ್ನು ಕೇಳಲಾರೆವು. ಬರೆದಿಟ್ಟಿದ್ದರೆ, ನಡುನಡುವೆ ಮನಸ್ಸಿಗೆ ದುಃಖವುಂಟಾದಾಗ ಅದನ್ನು ಓದಿದರೆ ಶಾಂತಿ ಲಭಿಸೀತು. ನೀನೇ ಓದು, ಅಥವಾ ಇನ್ನು ಯಾರೇ ಓದಲಿ, ಅವರ ಮನಸ್ಸಿನಲ್ಲಿ ಭಕ್ತಿ-ಪ್ರೇಮ ಹಾಗೂ ಪವಿತ್ರತೆಯ ಭಾವ ಹೊಮ್ಮಿ ಬರುವುದು.'' ನನ್ನ ತಾಯಿ ಶ್ರೀಮಾತೆಯವರ ಬಗ್ಗೆ ತಮ್ಮ ಪುಸ್ತಕದಲ್ಲಿ ಏನೇನು ಬರೆದಿಟ್ಟಿದ್ದರೋ ಅದನ್ನಿಲ್ಲಿ ನೀಡಲಾಗಿದೆ.

***— ನೀಲಿಮಾ ಚಟ್ಟೋಪಾಧ್ಯಾಯ, ಆರಾಂಬಾಗ್, ಹುಗ್ಲಿ ಜಿಲ್ಲೆ.***

ನನ್ನ ಮೊದಲ ಮಗು (ಹೆಣ್ಣುಮಗು) ಶಾಂತಿ ಜನಿಸಿದ ನಂತರ, ನನಗೆ ಅವಳಿ ಹೆಣ್ಣುಮಕ್ಕಳು ಹುಟ್ಟಿದರು. ಕೆಲವೇ ದಿನಗಳಲ್ಲಿ ಅವರೆಡೂ ಸತ್ತುಹೋದವು. ಆಗ ಸಹಜವಾಗಿಯೇ ನನಗೆ ಅತ್ಯಂತ ದುಃಖವುಂಟಾಗಿತ್ತು. ನನ್ನ ಬಾಲ್ಯಸ್ನೇಹಿತೆ ಸರಳಾ ಅಕ್ಕ ನನ್ನನ್ನು ಶ್ರೀಮಾತೆಯವರ ಬಳಿಗೆ ಕರೆದುಕೊಂಡು ಹೋದಳು. ಇದು ೧೯೧೮ರಲ್ಲಿ ನಡೆದ ಸಂಗತಿ. ಸರಳಾ ಅಕ್ಕ ಆಗ ಬೋಸ್‌ಪಾರಾ ಲೇನ್‌ನಲ್ಲಿದ್ದ ಸೋದರಿ ನಿವೇದಿತಾಳ ಶಾಲೆಯಲ್ಲಿ ವಾಸ ಮಾಡುತ್ತಿದ್ದಳು. ಈ ಸರಳಾ ಅಕ್ಕನೇ ಮುಂದೆ ಶಾರದಾ ಮಠದ ಮೊದಲ ಅಧ್ಯಕ್ಷೆಯಾಗಿದ್ದ ಪ್ರವ್ರಾಜಿಕಾ ಭಾರತೀಪ್ರಾಣಾ ಆದಳು. ನಿವೇದಿತಾಳ ಶಾಲೆಯಿಂದ ಬಂದು ಸರಳಾ ಅಕ್ಕ, ಶ್ರೀಮಾತೆಯವರ ಸೇವೆ ಮಾಡುತ್ತಿದ್ದಳು. ಶ್ರೀಮಾತೆಯವರಿಗೆ ಅವಳ ಮೇಲೆ ತುಂಬಾ ಪ್ರೀತಿ. ಸರಳಾ-ಅಕ್ಕ ನನ್ನನ್ನು 'ಉದ್ಬೋಧನ'ಕ್ಕೆ ಕರೆದುಕೊಂಡು ಹೋದಳು. ಆಗ 'ಶ್ರೀಮಾತೆಯವರ ಮನೆ' (ಅಂದರೆ, 'ಉದ್ಬೋಧನ') ಈಗಿನಷ್ಟು ದೊಡ್ಡ ಕಟ್ಟಡವಾಗಿರಲಿಲ್ಲ ; ಶ್ರೀಮಾತೆಯವರು ಎರಡನೇ ಅಂತಸ್ತಿನಲ್ಲಿದ್ದ ತಮ್ಮ ಕೋಣೆಯಲ್ಲಿ ಪೂಜೆ ಮಾಡುತ್ತಿದ್ದರು. ವರಾಂಡದಿಂದ (ಆಗ ವರಾಂಡ ಬಹಳ ಸಣ್ಣದಾಗಿ, ಅಗಲಕಿರಿದಾಗಿತ್ತು) ಶ್ರೀಮಾತೆಯವರನ್ನು ನೋಡಬಹುದಾಗಿತ್ತು. ಶ್ರೀಮಾತೆಯವರು ಆಳವಾದ ಧ್ಯಾನದಲ್ಲಿ ಮುಳುಗಿದ್ದರು. ಧ್ಯಾನದಲ್ಲಿ ಮುಳುಗಿದ್ದ ಶ್ರೀಮಾತೆ ಹಾಗೂ ಸಿಂಹಾಸನದಲ್ಲಿ ಆಸೀನರಾಗಿದ್ದ ಠಾಕೂರರನ್ನು (ಶ್ರೀರಾಮಕೃಷ್ಣರ ಭಾವಚಿತ್ರ) ನಾನು ಕಂಡೆ. ಇದೇ ನಾನು ಪಡೆದ ಶ್ರೀಮಾತೆಯವರ ಮೊದಲ ದರ್ಶನ. ನೋಡಿದಾಗ ನನಗನ್ನಿಸಿತು, ನಿಜವಾಗಿಯೂ ಅವರು ಜಗಜ್ಜನನಿಯಂತೆಯೇ ಇದ್ದಾರೆ - ಎಂಬುದಾಗಿ. ನೋಡುವುದಕ್ಕೆ ಅಷ್ಟೇನೂ ಸುಂದರಿಯಲ್ಲ , ಆದರೆ ಅವರ ಮುಖವನ್ನೆಲ್ಲ ಒಂದು ಬಗೆಯ ಜ್ಯೋತಿ ಆವರಿಸಿದಂತಿತ್ತು. ಆ ಮುಖದಲ್ಲಿ ಅಪೂರ್ವವಾದ ಕರುಣೆಯ ಭಾವವೊಂದು ಇತ್ತು. ಸ್ವಲ್ಪ ಹೊತ್ತಿನ ನಂತರ ಶ್ರೀಮಾತೆಯವರು ಕಣ್ತೆರೆದು, ಹೂವು ಹಾಗೂ ನೈವೇದ್ಯಗಳನ್ನು ಅರ್ಪಿಸಿ, ಒಂದೇ ಮನಸ್ಸಿನಿಂದ ಪೂಜೆ ಮಾಡಲಾರಂಭಿಸಿದರು. ಬಹಳ ಸಮಯದ ನಂತರ ಅವರು ನೈವೇದ್ಯ ಮುಗಿಸಿ, ವರಾಂಡಕ್ಕೆ ಬಂದು ನಿಂತುಕೊಂಡರು. ಸರಳಾ-ಅಕ್ಕ ಹಾಗೂ ನಾನು ಶ್ರೀಮಾತೆಯವರ ಪಾದಗಳ ಮೇಲೆ ತಲೆಯಿಟ್ಟು ಪ್ರಣಾಮ ಮಾಡಿದೆವು. ಶ್ರೀಮಾತೆಯವರು ಸರಳಾ-ಅಕ್ಕನನ್ನು ಕೇಳಿದರು, ''ಈ ಹುಡುಗಿ ಯಾರು?'' ಸರಳಾ ಅಕ್ಕ, ''ನನ್ನ ಬಾಲ್ಯಸ್ನೇಹಿತೆ. ಮನೆಯ ಹತ್ತಿರದಲ್ಲೇ ಇದ್ದಾಳೆ'' ಎಂದಳು. ಅವಳು ನನ್ನ ತಾಯಿ, ತಂದೆಯರ ಪರಿಚಯ ಹೇಳಿದಳು. ಅನಂತರ ಹೇಳಿದಳು: ''ಕೆಲವು ದಿನಗಳ ಹಿಂದೆ ಇವಳ ಅವಳಿ ಮಕ್ಕಳು ತೀರಿಕೊಂಡವು. ಅದರಿಂದ ಅವಳಿಗೆ ತುಂಬಾ ದುಃಖವಾಗಿದೆ. ಅದಕ್ಕಾಗಿ ಅವಳನ್ನು ನಿಮ್ಮ ಹತ್ತಿರ ಕರೆದುಕೊಂಡು ಬಂದೆ.'' ಶ್ರೀಮಾತೆಯವರು ವಾತ್ಸಲ್ಯಪೂರ್ಣವಾದ ಧ್ವನಿಯಿಂದ, ''ಅಯ್ಯೋ, ಮಕ್ಕಳೇ!'' ಎಂದರು. ನನ್ನ ತಲೆಯ ಮೇಲೆ ಕೈಯಿಟ್ಟು, ''ಒಳ್ಳೆಯದು, ನೀನು ನಡುನಡುವೆ

ಸಮಯ ಸಿಕ್ಕಿದಾಗಲೆಲ್ಲ ನನ್ನ ಬಳಿಗೆ ಬಾರಮ್ಮಾ'' ಎಂದರು. ಶ್ರೀಮಾತೆಯವರ ಆ ಪ್ರೀತಿಯ ಸ್ಪರ್ಶ ಹಾಗೂ ಮಮತೆಯಿಂದ ಕೂಡಿದ ಮಾತುಗಳು ನನ್ನ ದೇಹ-ಮನಸ್ಸುಗಳ ಮೇಲೆ ಅದೆಂತಹ ಪರಿಣಾಮವನ್ನುಂಟುಮಾಡಿತು ಎಂದು ನಾನು ಮಾತಿನ ಮೂಲಕ ವರ್ಣಿಸಲಾರೆ. ಅದೆಂಥ ಪ್ರೀತಿ-ಕರುಣೆಗಳಿಂದ ಕೂಡಿದ ಎರಡು ಅಪೂರ್ವ ಕಣ್ಣುಗಳು! ಎಂತಹ ಚೈತನ್ಯ ದಾಯಕ ಕರಸ್ಪರ್ಶವದು! ನನಗನ್ನಿಸಿತು, ಎಷ್ಟೊಂದು ಜನ್ಮ ಜನ್ಮಾಂತರಗಳ ತಾಯಿ ಅವರು - ಎಷ್ಟೊಂದು ಪ್ರೀತಿ, ಮಮತೆ ಹಾಗೂ ಕರುಣೆಗಳಿಂದ ತುಂಬಿದ ಪೂರ್ಣಕುಂಭದಂತೆ, ಕೇವಲ ನನಗೋಸ್ಕರ ನನ್ನ ಹೃದಯದಲ್ಲಿ ಕುಳಿತಿದ್ದಾರಲ್ಲ! ನಮಗೆ ಪ್ರಸಾದ ಕೊಡಲು ಗೋಲಾಪ್-ಮಾಗೆ ಹೇಳಿದರು ಶ್ರೀಮಾತೆ. ಗೋಲಾಪ್-ಮಾ ನಮಗೆ ಹಣ್ಣು-ಪ್ರಸಾದ ಕೊಟ್ಟರು. ಶ್ರೀಮಾತೆ ಹೇಳಿದರು: ''ತಿನ್ನಮ್ಮಾ. ಪ್ರಸಾದ ತಿಂದು ಕೈತೊಳೆ. ಬಳಿಕ ಚರಣಾಮೃತ (ತೀರ್ಥ) ಸ್ವೀಕರಿಸು.'' ನಾವು ಹಾಗೇ ಮಾಡಿದೆವು. ಬಳಿಕ ಶ್ರೀಮಾತೆಯವರ ಕೋಣೆಗೆ ಬಂದು ಕುಳಿತು ಕೊಂಡೆವು. ಶ್ರೀಮಾತೆಯವರು ಬಹಳ ಹೊತ್ತು ಮಾತುಕತೆ ಯಾಡಿದರು. ಸರಳಾ-ಅಕ್ಕ ಪಿಸುಗುಟ್ಟುತ್ತ ನನಗೆ ಹೇಳಿದಳು, ''ಈ ಸಲ ನಾವು ಹೊರಡಬೇಕು. ಇಲ್ಲದಿದ್ದರೆ ಶ್ರೀಮಾತೆಯವರ ಫಲಾಹಾರಕ್ಕೆ ತಡವಾದೀತು. ಗೋಲಾಪ್-ಮಾ ಬಯ್ಯುವುದಕ್ಕೆ ಆರಂಭಿಸಿಬಿಡುತ್ತಾರೆ.'' ನನಗೆ ಮನಸ್ಸೇ ಇಲ್ಲದಿದ್ದರೂ ಅಲ್ಲಿಂದ ಎದ್ದು ಬರಬೇಕಾಯಿತು. ಶ್ರೀಮಾತೆಯವರಿಗೆ ಪ್ರಣಾಮ ಮಾಡಿದೆ. ಅವರು ಎರಡೂ ಕೈಗಳನ್ನು ನನ್ನ ತಲೆಯ ಮೇಲೆ ಇಟ್ಟು ಹೇಳಿದರು: ''ಬಾಮ್ಮಾ. ಠಾಕೂರರು ನಿನ್ನ ಮನಸ್ಸಿಗೆ ಶಾಂತಿ ನೀಡಲಿ. ಮತ್ತೆ ಬಾ.'' ಜೀವಂತ ಜಗಜ್ಜನನಿಯನ್ನು ಪ್ರಾಣಪೂರ್ತಿಯಾಗಿ ನೋಡುತ್ತ, ಆ ದಿನದ ಮಟ್ಟಿಗೆ ವಿದಾಯ ಹೇಳಿದೆ.

ಅನಂತರ ನಾನು ಶ್ರೀಮಾತೆಯವರನ್ನು ನೋಡಲು ಆಗಾಗ 'ಉದ್ಬೋಧನ'ಕ್ಕೆ ಹೋಗುತ್ತಿದ್ದೆ. ಕೆಲವೊಮ್ಮೆ ಸರಳಾ-ಅಕ್ಕ ನೊಂದಿಗೆ, ಕೆಲವೊಮ್ಮೆ ನಾನೊಬ್ಬಳೇ, ಕೆಲವೊಮ್ಮೆ ಸುಧೀರಾ-ಅಕ್ಕನೊಡನೆ (ಸುಧೀರಾ ಬಸು), ಅಥವಾ ಕೆಲವು ಬಾರಿ ಪ್ರಫುಲ್ಲ -ಚಿಕ್ಕಮ್ಮನೊಂದಿಗೆ (ಆಕೆ ಬಾಲವಿಧವೆ; ಸರಳಾ-ಅಕ್ಕನ ಕಿರಿಯ ಚಿಕ್ಕಮ್ಮ). ನಾನು ಶ್ರೀಮಾತೆಯವರ ಬಳಿಯಲ್ಲಿ ಇದ್ದಷ್ಟು ಹೊತ್ತು ನನಗೆ ಬಹಳ ಆನಂದವುಂಟಾಗುತ್ತಿತ್ತು. ಆ ಬಳಿಕ ನನಗೆ ಮಗ ಹುಟ್ಟಿದ - ಹರು. ಆಗ ನಾವು ಈಗಿನ ನಿವೇದಿತಾ ಲೇನ್ ನಲ್ಲಿದ್ದ ಒಂದು ಮನೆಯಲ್ಲಿದ್ದೆವು. ಹರುವಿಗೆ ಮೂರು-ನಾಲ್ಕು ವರ್ಷ ವಯಸ್ಸಾಗುತ್ತಲೇ ಸರಳಾ-ಅಕ್ಕ ಹೇಳಿದಳು: ''ಹೊರಡು. ಶ್ರೀಮಾತೆಯವರಿಗೆ ನಿನ್ನ ಮಗನನ್ನು ತೋರಿಸಿ ಬರೋಣ.'' ನಾನು ಹೊರಟೆ. ನನ್ನನ್ನು ನೋಡುತ್ತಲೇ ಶ್ರೀಮಾತೆ ಕೇಳಿದರು, ''ಇಷ್ಟು ದಿನ ಯಾಕಮ್ಮಾ ಬರಲಿಲ್ಲ?'' ನಾನು ಹರುವನ್ನು ಶ್ರೀಮಾತೆಯವರ ಪಾದಗಳ ಬಳಿ ಮಲಗಿಸಿ ಹೇಳಿದೆ, ''ನನ್ನ ಈ ಮಗ ಹುಟ್ಟಿದನಲ್ಲಾ , ಅದಕ್ಕಾಗಿ, ಅಮ್ಮಾ. ಇವನಿಗೆ ನಿಮ್ಮ ಪಾದಗಳ ಧೂಳಿಯನ್ನು ಅನುಗ್ರಹಿಸಿ.'' ಶ್ರೀಮಾತೆ ಹೇಳಿದರು, ''ಅಯ್ಯೋ, ಮಗುವನ್ನೇಕೆ ನೆಲದ ಮೇಲೆ ಮಲಗಿಸಿದ್ದೀಯಾ? ಇಲ್ಲಿ ಕೊಡು. ನನ್ನ ಮಡಿಲಲ್ಲಿ ಇರಿಸು.'' ಹರುವನ್ನು ಮಡಿಲಲ್ಲಿ ಇರಿಸಿಕೊಂಡು ಅವರೆಂದರು, ''ಆಹ! ಒಳ್ಳೇ ಮಗು!'' ಹರುವಿನ ತಲೆಯ ಮೇಲೆ ಕೈಯಿಟ್ಟು ಶ್ರೀಮಾತೆ ಆಶೀರ್ವಾದ ಮಾಡಿದ್ದನ್ನು ಕಂಡು ನಾನು ಒಮ್ಮೆಲೇ ಆನಂದಭರಿತಳಾದೆ. ಸ್ವಲ್ಪ ಹೊತ್ತಿನ ನಂತರ ನಾನು ಶ್ರೀಮಾತೆಯವರಿಗೆ ಪ್ರಣಾಮ ಮಾಡಿ ಮರಳಿ ಬಂದೆ. ಅಲ್ಲಿಂದ ಮರಳಿ ಬರುತ್ತಲೇ ನನಗೆ ಅತ್ಯಂತ ದುಃಖವುಂಟಾಯಿತು. ಮತ್ತೆ ಯಾವಾಗ ಅಲ್ಲಿಗೆ ಹೋಗುವೆನೋ, ಯಾರಿಗೆ ಗೊತ್ತು? ಮರಳುವಾಗ ಶ್ರೀಮಾತೆಯವರು ತಲೆಯ ಮೇಲೆ ಕೈಯಿಟ್ಟು, ಗಲ್ಲವನ್ನು ಸ್ಪರ್ಶಿಸಿ ಆದರಿಸುತ್ತಿದ್ದರು. ಅವರ ಸ್ಪರ್ಶವು ಚಿರಕಾಲವೂ ಹಾಗೇ ಉಳಿಯುವಂತೆ ಅನ್ನಿಸುತ್ತಿತ್ತು.

ಶ್ರೀಮಾತೆಯವರು ಅಂತರ್ಯಾಮಿನಿಯಾಗಿದ್ದರು. ಪ್ರತಿದಿನವೂ ನಾನು ಭಾವಿಸುತ್ತಿದ್ದೆ, ಇಷ್ಟು ದಿನಗಳಿಂದ ಶ್ರೀಮಾತೆಯವರ ಬಳಿಗೆ ಹೋಗುತ್ತಿದ್ದೇನೆ, ಆದರೆ ಎಂದಿಗೂ ಅವರಿಗೆ ಒಂದಿಷ್ಟು ಪಾದಸೇವೆ ಮಾಡುವ ಭಾಗ್ಯ ಸಿಗಲಿಲ್ಲವಲ್ಲಾ - ಎಂದು. ಒಂದು ದಿನವಾದರೂ ಶ್ರೀಮಾತೆಯವರ ಪಾದಗಳನ್ನು ಒತ್ತಲು ಸಾಧ್ಯವಾಗಿದ್ದರೆ! ಗೋಲಾಪ್-ಮಾ ಅವರ ಭಯದಿಂದಾಗಿ ನನ್ನ ಮನಸ್ಸಿನ ಈ ಬಯಕೆಯನ್ನು ಶ್ರೀಮಾತೆಯವರ ಮುಂದೆ ಎಂದಿಗೂ ಬಾಯಿಬಿಟ್ಟು ತಿಳಿಸಲು ಸಾಧ್ಯವಾಗಿರಲಿಲ್ಲ. ಹೇಳಿದ್ದಿದ್ದರೆ ಶ್ರೀಮಾತೆ ಸ್ವತಃ ತಾವೇ ಒಂದಿಷ್ಟು ಸೇವೆ ಮಾಡಲು ಅವಕಾಶ ಕೊಡುತ್ತಿದ್ದರು. ನನ್ನ ಮನಸ್ಸಿನ ಬಯಕೆಯನ್ನು ಮನಸ್ಸಿನಲ್ಲೇ ಅಡಗಿಸಿಕೊಂಡು, ನನ್ನಲ್ಲೇ ನಾನು ಅಳುತ್ತ ಹೀಗೆ ಮಾತನಾಡಿಕೊಳ್ಳುತ್ತಿದ್ದೆ: ''ಅಮ್ಮಾ, ಠಾಕೂರರನ್ನಂತೂ ನೋಡಲಿಲ್ಲ. ನಿನ್ನ ದಯೆಯಿಂದಾಗಿ ನಾನು ನಿನ್ನನ್ನು ಕಂಡಿದ್ದೇನೆ. ನಿನ್ನೊಂದಿಗೆ ಮಾತುಕತೆ ಆಡಿದ್ದೇನೆ. ನಿನ್ನ ಪಾದಗಳನ್ನು ಸ್ಪರ್ಶಿಸಿದ್ದೇನೆ. ನನ್ನ ತಲೆ, ಮುಖ ಇವುಗಳನ್ನು ನೀನು ಸ್ಪರ್ಶಿಸಿದ್ದೀಯೆ. ಆದರೆ, ನಾನು ಸಂಸಾರಿಯಾಗಿರುವ ಕಾರಣ ನನ್ನಿಂದ ಸ್ವಲ್ಪವಾದರೂ ಸೇವೆಯನ್ನು ಸ್ವೀಕರಿಸದೆ ಇರುವೆಯಾ? ನಿನ್ನ ಪಾದಗಳ ಮೇಲೆ ಒಂದಿಷ್ಟು ಕೈಯಾಡಿಸಲು ನನಗೆ ಸ್ವಲ್ಪವೂ ಯೋಗ್ಯತೆಯಿಲ್ಲವೆ?''

ಆ ಬಳಿಕ ಒಂದು ದಿನ ನಾನು ಶ್ರೀಮಾತೆಯವರ ಬಳಿಗೆ ಹೋದೆ. ಆಗ ಶಾಂತಿ ನನ್ನೊಂದಿಗಿದ್ದಳು. ಶ್ರೀಮಾತೆಯವರ ಕೋಣೆಯನ್ನು ಪ್ರವೇಶಿಸಿ ನೋಡಿದೆ - ಅವರು ಮಲಗಿದ್ದರು. ಎರಡು-ಮೂರು ಜನ ಭಕ್ತೆಯರು ನೆಲದಲ್ಲಿದ್ದ ಚಾಪೆಯ ಮೇಲೆ ಕುಳಿತಿದ್ದರು. ನಾನು ದೂರದಿಂದ ನೆಲಕ್ಕೆ ತಲೆಯನ್ನು ಸ್ಪರ್ಶಿಸಿ ನಮಸ್ಕಾರ ಮಾಡಿದೆ. ಆಗ ಶ್ರೀಮಾತೆಯವರು ಹೇಳಿ

ದರು, ''ಬಂದೆಯಾ, ಅಮ್ಮಾ? ಕುಳಿತುಕೋ. ದೇಹಾರೋಗ್ಯ ಚೆನ್ನಾಗಿಲ್ಲ. ನನ್ನಿಂದಾಗಿ ಶರತ್, ಗೋಲಾಪ್, ಯೋಗಿನ್, ಸರಳಾ ಎಲ್ಲರಿಗೂ ತೊಂದರೆಯಾಗಿದೆ. ನನ್ನ ಬಗ್ಗೆ ನನಗೇ ಲಜ್ಜೆಯುಂಟಾಗುತ್ತಿದೆ. ಆದರೂ ಏನು ಗೊತ್ತೇನಮ್ಮಾ, ದೇಹಧಾರಣೆ ಮಾಡಿದ ಮೇಲೆ ದೇಹದ ನೋವನ್ನು ಅನುಭವಿಸಲೇಬೇಕು.'' ಇಷ್ಟು ಹೇಳಿದ ನಂತರ ಶ್ರೀಮಾತೆಯವರು ಸುಮ್ಮನಾದರು. ನಾನು ಶ್ರೀಮಾತೆಯವರ ಮುಖವನ್ನೇ ನೋಡುತ್ತ ನಿಂತೆ. ಸ್ವಲ್ಪ ಹೊತ್ತಿನ ನಂತರ ಅವರು ನನ್ನತ್ತ ನೋಡಿ ಹೇಳಿದರು, ''ನನಗೆ ವಯಸ್ಸಾಗಿಬಿಟ್ಟಿದೆ. ವಾತ ಹಿಡಿದುಕೊಂಡುಬಿಟ್ಟಿದೆ. ಕೈಕಾಲುಗಳಲ್ಲಿ ವಾತದ ನೋವು. ಸ್ವಲ್ಪ ಕಾಲು ಒತ್ತಿದರೆ ಒಂದಿಷ್ಟು ಹಿತವಾಗುತ್ತಿತ್ತು. ನೀನು ಸ್ವಲ್ಪ ಕಾಲು ಒತ್ತುತ್ತೀಯಾ?'' ಒಬ್ಬಾಕೆ ಭಕ್ತೆ ಆ ಕ್ಷಣವೇ ಎದ್ದು ನಿಂತು , ''ಅಮ್ಮಾ, ನಾನು ಒತ್ತುತ್ತೇನೆ'' ಎಂದಳು. ಶ್ರೀಮಾತೆಯವರು ಪ್ರೀತಿಯಿಂದ ಆಕೆಯತ್ತ ನೋಡಿ ಹೇಳಿದರು, ''ನೀನು ಕುಳಿತುಕೋ ತಾಯಿ. ಅಂದೊಂದು ದಿನ ನೀನು ಎಷ್ಟು ಹೊತ್ತು ಕಾಲೊತ್ತಿದೆ! ಇವತ್ತು ಸುಹಾಸಿನಿ ಒತ್ತಲಿ.'' ನನ್ನ ಮನಸ್ಸಿನಲ್ಲಿ ಆಗ ಬಿರುಗಾಳಿಯೆದ್ದಿತು. ಆನಂದ, ವಿಸ್ಮಯ, ಆವೇಗಗಳಿಂದ ನಾನು ತುಂಬಿಹೋದೆ; ನನಗೆ ಅದನ್ನು ತಡೆದುಕೊಳ್ಳಲಾಗಲಿಲ್ಲ. ಜೊತೆಜೊತೆಗೇ ನಾನು ಶ್ರೀಮಾತೆಯವರ ಪಾದಗಳನ್ನು ಒತ್ತುತ್ತ ನನ್ನ ಮನಸ್ಸಿನಲ್ಲಿ ಹೇಳಿಕೊಳ್ಳತೊಡಗಿದೆ: ''ಅಮ್ಮಾ, ನೀನು ಅಂತರ್ಯಾಮಿನಿ. ನೀನು ನನ್ನ ಅಂತರಂಗದ ಬಯಕೆಯನ್ನು ಅರಿತುಕೊಂಡೆಯಮ್ಮಾ!'' ಕಣ್ಣೀರು ಉಕ್ಕಿಬಂದು, ಕೆಳಕ್ಕೆ ಬೀಳುವುದರಲ್ಲಿತ್ತು. ನನ್ನ ಅತ್ಯುಚ್ಚ ಬಯಕೆ ಪೂರೈಸಿದ ಕಾರಣ, ನನ್ನ ಹೃದಯ ಆನಂದದಿಂದ ತುಂಬಿ, ಆನಂದಬಾಷ್ಪ ಉಕ್ಕಿ ಹರಿಯುವುದನ್ನು ಅಡಗಿಸಿಕೊಂಡು, ನೆಲದಲ್ಲಿ ಕುಳಿತು ಶ್ರೀಮಾತೆಯವರ ಪಾದಗಳಲ್ಲಿ ಕೈಯಾಡಿಸುತ್ತಿದ್ದೆ. ಸ್ವಲ್ಪ ಹೊತ್ತಾದ ಮೇಲೆ ಶ್ರೀಮಾತೆ ಹೇಳಿದರು, ''ಇದೇನು? ನೆಲದ ಮೇಲೆ ಹೀಗೇಕೆ ಕುಳಿತು ಹೇಗೆ ಕಾಲೊತ್ತುವೆಯಮ್ಮಾ? ನೀನು ಎದ್ದು ಬಂದು, ಮಂಚದ ಮೇಲೆ ಕುಳಿತು ತುಸು ಜೋರಾಗಿ ಕಾಲೊತ್ತು'' ಎಂದರು. ಶ್ರೀಮಾತೆಯವರ ಆದೇಶ! ಮನಸ್ಸಿನಲ್ಲಿಯೇ ನಾನು ಠಾಕೂರ್ ಹಾಗೂ ಶ್ರೀಮಾತೆಯವರ ಬಳಿ ಕ್ಷಮೆ ಕೋರಿ, ಮಂಚದ ಮೇಲೆ ಕುಳಿತು, ತುಂಬ ಹೊತ್ತು ಶ್ರೀಮಾತೆಯವರ ಅತ್ಯಂತ ಮೃದುವಾದ ಪಾದಗಳನ್ನು ಮಡಿಲಲ್ಲಿರಿಸಿಕೊಂಡು, ದೇವತೆ-ಋಷಿ-ಮುನಿಗಳು ಆರಾಧಿಸಿದಂತಹ ಆ ದುರ್ಲಭವಾದ ಆದ್ಯಾಶಕ್ತಿಯ ಪಾದಸೇವೆ ಮಾಡಿದೆ. ಸ್ವಲ್ಪ ಹೊತ್ತಿನ ನಂತರ ಪಕ್ಕದಲ್ಲೇ ಮತ್ತೆ ಮಲಗಿಕೊಂಡ ಶ್ರೀಮಾತೆಯವರು ಹೇಳಿದರು: ''ಈಗ ತುಂಬ ಹಿತವೆನಿಸುತ್ತದೆ.'' ಶ್ರೀಮಾತೆ ಪಕ್ಕದಲ್ಲೇ ಮಲಗಿದ್ದಾರೆ; ನಾನು ಸನ್ನೆ ಮಾಡಿ ಶಾಂತಿಯನ್ನು ಕರೆದು ಹೇಳಿದೆ, ''ಬಾ, ನೀನೂ ಶ್ರೀಮಾತೆಯವರ ಪಾದಗಳನ್ನು ತುಸು ಒತ್ತು.'' ಶಾಂತಿ ತನ್ನ ಎಳೆಯ ಕೈಗಳಿಂದ ತಮ್ಮ ಪಾದಗಳನ್ನು ಒತ್ತುತ್ತಿದ್ದುದನ್ನು ನೋಡಿದ ಶ್ರೀಮಾತೆಯವರು ನಗುತ್ತ ಹೇಳಿದರು, ''ಏನಮ್ಮಾ, ನೀನೇ? ನೀನು ಇನ್ನು ಒತ್ತಬೇಕಾಗಿಲ್ಲ.'' ಹೀಗೆ ಹೇಳಿದ ಅವರು ಆಕೆಯನ್ನು ಆದರಿಸುತ್ತ, ಚುಂಬಿಸಿ ಪಕ್ಕದಲ್ಲಿ ಕುಳಿತುಕೊಳ್ಳಲು ಹೇಳಿದರು.

ಸ್ವಲ್ಪ ಹೊತ್ತಾದ ನಂತರ ಗೋಲಾಪ್-ಮಾ ಕೋಣೆಯೊಳಕ್ಕೆ ಬಂದರು. ಅವರನ್ನು ಕಂಡು ಭಯದಿಂದ ನನ್ನ ಕೈಗಳು ತಾನಾಗಿಯೇ ನಿಂತವು. ನಾನು ಶ್ರೀಮಾತೆಯವರ ಮಂಚದ ಮೇಲೆ ಕುಳಿತುಕೊಂಡದ್ದನ್ನು ನೋಡಿ ಗೋಲಾಪ್-ಮಾ ಬೈದುಬಿಡುವರೆಂದೇ ಭಾವಿಸಿದ್ದೆ. ಶ್ರೀಮಾತೆಯವರು ಕಣ್ಣು ಮುಚ್ಚಿಕೊಂಡಿದ್ದರು. ನಾನು ಕೈಯಾಡಿಸುತ್ತಿದ್ದುದು ನಿಂತ ಕೂಡಲೇ ಅವರು ಕಣ್ತೆರೆದು ನೋಡಿ, ''ಏನಮ್ಮಾ, ಏನಾಯಿತು?'' ಎಂದರು. ಬಳಿಕ ಅವರು ಗೋಲಾಪ್‌ಮಾ-ರನ್ನು ನೋಡಿದೊಡನೆಯೇ ಅವರಿಗೆ ಎಲ್ಲವೂ ತಿಳಿಯಿತು. ಗೋಲಾಪ್-ಮಾ ಶ್ರೀಮಾತೆಯವರನ್ನು ಕೇಳಿದರು: ''ನನ್ನನ್ನೇಕೆ ಕರೆಯಲಿಲ್ಲ?'' ಶ್ರೀಮಾತೆಯವರು ತಮ್ಮ ಸುಕೋಮಲ ಸ್ವರದಿಂದ ಹೇಳಿದರು: ''ನೀವೆಲ್ಲ ಯಾವಾಗಲೂ ಇದನ್ನು ಮಾಡುತ್ತೀರಿ. ಅವರಿಗೂ ಮನಸ್ಸಿನಲ್ಲಿ ಆಸೆಗಳು ಉಂಟಾಗುತ್ತವೆ. ಆದ್ದರಿಂದ ನಾನೇ ಹೇಳಿದೆ. ಮಂಚದಲ್ಲಿ ಕುಳಿತು ಪಾದಗಳನ್ನು ಒತ್ತುವಂತೆ ನಾನೇ ಅವಳಿಗೆ ಹೇಳಿದೆ.'' ಗೋಲಾಪ್ ಮಾ ನಸುನಕ್ಕು ನನ್ನತ್ತ ನೋಡಿ ಹೇಳಿದರು, ''ನೀಡಮ್ಮಾ, ಹುಡುಗಿ, ನೀಡು.'' ಗೋಲಾಪ್-ಮಾ ಈ ರೀತಿ ನಗುತ್ತ ಮಾತನಾಡಿದ್ದನ್ನು ನಾನು ಇದೇ ಮೊದಲ ಬಾರಿ ನೋಡಿದೆ. ಗೋಲಾಪ್-ಮಾ ನಗುಮುಖದೊಂದಿಗೆ ಶ್ರೀಮಾತೆಯವರ ಕೋಣೆಯಿಂದ ಹೊರಟುಹೋದರು. ನಾನು ಇನ್ನೂ ಸ್ವಲ್ಪ ಹೊತ್ತು ಶ್ರೀಮಾತೆಯವರಿಗೆ ಪಾದಸೇವೆ ಮಾಡಿದೆ. ಸಂಜೆಯಾಗುತ್ತಿದ್ದಂತೆ ಅವರು ಹೇಳಿದರು, ''ಇರಮ್ಮಾ, ಇರು. ಈಗ ತುಂಬ ಸಮಾಧಾನವಾಗಿದೆ.'' ಸ್ವಲ್ಪ ಹೊತ್ತಾದ ಮೇಲೆ ಶ್ರೀಮಾತೆಯವರಿಗೆ ಪ್ರಣಾಮ ಮಾಡಿ ಮನೆಗೆ ಮರಳಿದೆ. ಮನೆಗೆ ಬಂದ ಮೇಲೆ ನನ್ನ ಎರಡು ಕೈಗಳಿಂದ ಬೇರೆ ಯಾವ ಕೆಲಸ ಮಾಡುವುದಕ್ಕೂ ಮನಸ್ಸಾಗಲಿಲ್ಲ. ಶ್ರೀಮಾತೆಯವರ ಪಾದಗಳ ಸ್ಪರ್ಶವನ್ನು ಪಡೆದ ಈ ಎರಡು ಕೈಗಳನ್ನು ಬೇರೆ ಯಾವುದರ ಮೇಲಿಟ್ಟರೂ, ಆ ಸ್ಪರ್ಶ ಹೊರಟುಹೋಗುವುದು - ಎಂದು ನನಗೆ ಅನ್ನಿಸುತ್ತಿತ್ತು . ಆನಂದದಿಂದ ಅಂದು ರಾತ್ರಿ ನನಗೆ ನಿದ್ದೆ ಬರಲಿಲ್ಲ. ಅಂತರ್ಯಾಮಿನಿ ಶ್ರೀಮಾತೆಯವರ ಕರುಣಾಪೂರ್ಣ ಮಾತುಗಳನ್ನು ನೆನೆಯುತ್ತ ಪದೇ ಪದೇ ನನ್ನ ಕಣ್ಣುಗಳಿಂದ ನೀರಿಳಿಯಿತು; ಅದರಿಂದ ನನ್ನೆದೆ ಒದ್ದೆಯಾಗಿ ಹೋಯಿತು. ಅದಾದ ಮೇಲೆ ಇನ್ನೂ ಎರಡು-ಮೂರು ದಿನ ನನಗೆ ಈ ನನ್ನ ಎರಡು ಕೈಗಳಿಂದ ಬೇರೆ ಏನನ್ನು ಮಾಡಲೂ ಮನಸ್ಸಾಗಲಿಲ್ಲ.

ಸಾಯಂಕಾಲದ ಹೊತ್ತು ಶ್ರೀಮಾತೆಯವರು, ''ದುರ್ಗಾ ದುರ್ಗಾ, ಶಿವ ಶಿವ, ಲಕ್ಷ್ಮೀ-ನಾರಾಯಣ, ಹರಿಬೋಲ್ ಹರಿಬೋಲ್, ಗುರುದೇವ ಗುರುದೇವ, ರಾಧಾ-ಶ್ಯಾಮ, ಗಂಗಾ

ಗಂಗಾ ಬ್ರಹ್ಮವಾರಿ, ಗೋವಿಂದ ಗೋವಿಂದ, ಜಯ್ ಮಾ ಜಗದಂಬಾ'' ಎನ್ನುತ್ತಿದ್ದರು. ಅವರಿಂದ ಎಂಥ ಪ್ರೀತಿಯನ್ನು ಪಡೆದೆ ಎಂಬುದನ್ನು ಬೇರೆ ಯಾವುದರೊಂದಿಗೂ ಹೋಲಿಸಲಾಗದು. ಒಂದು ದಿನ ಶ್ರೀಮಾತೆಯವರು ಒಬ್ಬ ವ್ಯಕ್ತಿಗೆ ಹೇಳಿದರು, ''ಯಾವಾಗಲೂ ಠಾಕೂರರ (ಶ್ರೀರಾಮಕೃಷ್ಣರ) ಮಾತುಗಳನ್ನೇ ನೆನೆಯುತ್ತಿರು. ಆಗ ಮನಸ್ಸು ತಾನಾಗಿಯೇ ಶಾಂತವಾಗುವುದನ್ನು ನೀನೇ ನೋಡುವೆ.'' ಶ್ರೀಮಾತೆಯವರ ಈ ಮಾತನ್ನು ನಾನು ಯಾವಾಗಲೂ ಮನಸ್ಸಿನಲ್ಲಿ ಸ್ಥಿರವಾಗಿ ಇಟ್ಟುಕೊಂಡಿದ್ದೇನೆ. ಜೀವನದಲ್ಲಿ ಯಾವಾಗ ನಾನು ದುಃಖ, ಸಂಕಟಗಳಿಗೆ ಈಡಾದೆನೋ ಆ ಸಮಯದಲ್ಲೆಲ್ಲ ಶ್ರೀಮಾತೆಯವರ ಮಾತುಗಳನ್ನು ನೆನೆದು ಶಾಂತಿಯನ್ನು ಪಡೆದಿದ್ದೇನೆ, ಶಕ್ತಿಯನ್ನು ಹೊಂದಿದ್ದೇನೆ.

ಒಂದು ದಿನ ನಾನು 'ಶ್ರೀಮಾತೆಯವರ ಮನೆ'ಗೆ ('ಉದ್ಬೋಧನ') ಹೋದಾಗ, ಶ್ರೀಮಾತೆಯವರ ಕೋಣೆಯಲ್ಲಿ ಅನೇಕ ಮಂದಿ ಭಕ್ತೆಯರು ಕುಳಿತಿದ್ದರು. ಶ್ರೀಮಾತೆ ಮಲಗಿದ್ದರು. ನನ್ನನ್ನು ನೋಡಿ ಅವರು ಮಂದಹಾಸ ಬೀರಿ ಹೇಳಿದರು, ''ಬಾ, ಬಾ. ಇವತ್ತು ಮಗಳನ್ನು ಏಕೆ ಕರೆದುಕೊಂಡು ಬರಲಿಲ್ಲ? ಅವರೆಲ್ಲ ಚೆನ್ನಾಗಿದ್ದಾರೆ ತಾನೆ?'' ನಾನೆಂದೆ: ''ಹೌದಮ್ಮಾ, ಅವರೆಲ್ಲರೂ ಚೆನ್ನಾಗಿದ್ದಾರೆ. ಮಗಳನ್ನು ಕರೆದುಕೊಂಡು ಬಂದರೆ ಅವಳು ಗದ್ದಲವೆಬ್ಬಿಸಿ ನಿಮಗೆಲ್ಲ ತೊಂದರೆ ಕೊಡುತ್ತಾಳೆ. ಎಲ್ಲರಿಗೂ ಕಾಟ ಕೊಡುತ್ತಾಳೆ ಅವಳು. ನಾನು ಮನೆಗೆ ಬೇಗನೆ ಹೊರಡಬೇಕಾದೀತು. ಅದಕ್ಕಾಗಿಯೇ ಅವಳನ್ನು ಇವತ್ತು ಬಿಟ್ಟು ಬಂದಿದ್ದೇನೆ.'' ಶ್ರೀಮಾತೆಯವರು ನಗುತ್ತ, ''ಓ! ಅದೇನು ತೊಂದರೆ ಕೊಡುತ್ತಾಳೋ, ನನಗೆ ! ನನಗರ್ಥವಾಗುತ್ತಿಲ್ಲ. ಅದೂ ಅಲ್ಲದೆ, ಚಿಕ್ಕ ಮಕ್ಕಳಂತೂ ಒಂದಿಷ್ಟು ತುಂಟತನ ಮಾಡಿಯೇ ಮಾಡುತ್ತವೆ. ಈ ರಾಧಿಯನ್ನು ನೋಡು – ಅವಳೇನು ಕಡಿಮೆ ತೊಂದರೆ ಕೊಡುತ್ತಾಳೆ ಅಂದುಕೊಂಡಿದ್ದೀಯಾ? ಅವಳ ತಾಯಿಯಂತೂ ಹುಚ್ಚಿ! ಅವಳದು ಅದೇನು ಗಲಾಟೆ, ಆನಂದ ಇತ್ಯಾದಿ ಏನಿದ್ದರೂ ನನ್ನ ಹತ್ತಿರವೇ ಆಗಬೇಕು. ಅದೆಂಥ ಹಟ ಅವಳದು! ಹೇಳುತ್ತಾರಲ್ಲ, 'ನೆನೆದ ಸಕ್ಕರೆ ಒಣಗಿಸಿ ತಿನ್ನುತ್ತೇನೆ, ಒಣಗಿದ ಸಕ್ಕರೆ ನೆನೆಸಿ ತಿನ್ನುತ್ತೇನೆ' ಅಂತ? ಈ ರೀತಿಯ ಹಟ ರಾಧಿಯದು. ಅವಳ ಬಯಕೆಯನ್ನು ಪೂರೈಸದಿದ್ದರೆ ಅಳು, ಕಿರುಚಾಟ ಆರಂಭ ಮಾಡುತ್ತಾಳೆ. ನನಗೆ ಎಂಥ ಹೊಡೆತ ಕೊಟ್ಟಿದ್ದಾಳೆಂದರೆ, ಅದನ್ನು ಏನೆಂದು ವಿವರಿಸಲಿ? ಅವಳು ನನಗೆ ಮಾಡುತ್ತಿದ್ದ ಅನಾಚಾರವನ್ನು ಕಂಡು ನನ್ನ ತಾಯಿಗೆ ಆತಂಕವುಂಟಾಗುತ್ತಿತ್ತು. ಅವಳು ಗೊಣಗಾಡುತ್ತ ಹೇಳುತ್ತಿದ್ದಳು, 'ತನ್ನ ಹೊಟ್ಟೆಯಲ್ಲಂತೂ ಒಂದು ಮಗುವಾಗಲಿಲ್ಲ, ಬೇರೆಯವರ ಮಕ್ಕಳ ಜಂಜಾಟವನ್ನೆಲ್ಲ ತಾನು ಮೈಮೇಲೆ ಎಳೆದುಕೊಂಡು ಅದು ಹೇಗೆ ನಗುಮುಖದಿಂದ ಇರುತ್ತೀಯೋ ನೀನು? ನನಗೊಂದೂ ಅರ್ಥವಾಗುತ್ತಿಲ್ಲ' ಅಂತ. ನಾನು ಅವರಿಗೆ ಏನೇನೋ ಹೇಳಿ ಸಮಾಧಾನಪಡಿಸುತ್ತಿದ್ದೆ.'' ಈ ಮಾತುಗಳನ್ನು ಆಡಿದ ನಂತರ ಶ್ರೀಮಾತೆ ಸುಮ್ಮನಾದರು.

ಅಷ್ಟರಲ್ಲಿ ಒಬ್ಬಾಕೆ ಭಕ್ತೆ ನಗುತ್ತ ಹೇಳಿದಳು, ''ಸರಿ ಅಮ್ಮಾ, ಅಜ್ಜಿ ಇಂದು ಬದುಕಿದ್ದಿದ್ದರೆ ಅವರಿಗೆ ಇನ್ನೂ ಹೆಚ್ಚು ಆತಂಕವುಂಟಾಗುತ್ತಿತ್ತು. ಈಗ ಎಷ್ಟೊಂದು ಮಂದಿ ಗಂಡು, ಹೆಣ್ಣು ಮಕ್ಕಳು 'ಅಮ್ಮಾ, ಅಮ್ಮಾ' ಅಂತ ಕರೆಯುತ್ತ ನಿಮ್ಮ ಬಳಿಗೆ ಬಂದು ಪೀಡಿಸುತ್ತಿದ್ದಾರೆ! ನಾವಂತೂ ನಿಮ್ಮ ಹೊಟ್ಟೆಯಲ್ಲಿ ಹುಟ್ಟಲಿಲ್ಲ, ಆದರೂ ನಾವು ನಿಮ್ಮ ಮಕ್ಕಳೇ ತಾನೆ?'' ಈ ಮಾತನ್ನು ಕೇಳಿ ಶ್ರೀಮಾತೆಯವರು ಎದ್ದು ಕುಳಿತರು. ''ಏನಂದೆ? ನನ್ನ ಹೊಟ್ಟೆಯಲ್ಲಿ ಹುಟ್ಟಲಿಲ್ಲವೆ? ಹಾಗಿದ್ದರೆ, ಇನ್ನು ಯಾರ ಹೊಟ್ಟೆಯಲ್ಲಿ ಹುಟ್ಟಿದ್ದೀಯಂತೆ? ನನ್ನ ಮಕ್ಕಳಲ್ಲವೆ? ಮತ್ತೆ ಇನ್ನಾರ ಮಕ್ಕಳು? ನಾನಲ್ಲದೆ ಇನ್ನು ಬೇರೆ ತಾಯಿ ಯಾರಿದ್ದಾರೆ? ಎಲ್ಲ ಹೆಣ್ಣುಮಕ್ಕಳ ಅಂತರಂಗದಲ್ಲಿ ನಾನಿದ್ದೇನೆ. ಎಲ್ಲ ತಾಯಂದಿರ ಒಳಗೆ ನಾನಿದ್ದೇನೆ. ಯಾರು ಎಲ್ಲಿಂದಲಾದರೂ ಬರಲಿ, ಎಲ್ಲರೂ ನನ್ನ ಮಕ್ಕಳೇ. ಇದನ್ನು ಸತ್ಯವೆಂದೇ ತಿಳಿದುಕೋ. ಯಾರು 'ಅಮ್ಮಾ' ಎಂದು ಕರೆಯುತ್ತಾರೆ, ಯಾರು ನನ್ನ ಬಳಿಗೆ ಬರುತ್ತಾರೆ, ಅವರೆಲ್ಲ ನನ್ನ ಮಕ್ಕಳೇ. ನನ್ನ ತಾಯಿ ಕೂಡ ಕೊನೆಯ ದಿನಗಳಲ್ಲಿ ನರೇನ್, ರಾಖಾಲ್, ಶರತ್, ಶಾರದ, ಯೋಗೇನ್, ನಿರಂಜನ್, ಗಿರೀಶಬಾಬು, ನಿವೇದಿತಾ — ಇವರನ್ನೆಲ್ಲ ನೋಡಿ ಇದನ್ನು ಅರ್ಥಮಾಡಿಕೊಂಡಿದ್ದರು. ಅವರೆಲ್ಲ 'ಅಮ್ಮಾ' ಎಂದು ನನ್ನನ್ನು ಕರೆಯುತ್ತಿದ್ದುದನ್ನು ಕೇಳಿ ನನ್ನ ತಾಯಿ ಎಷ್ಟು ಆನಂದಪಡುತ್ತಿದ್ದರು! 'ಆಹಾ, ನನ್ನ ಮನಸ್ಸಿನ ಬಯಕೆಯನ್ನು ಇಷ್ಟು ದಿನಗಳಾದ ಮೇಲೆ ದುರ್ಗಾಮಾತೆ ಪೂರೈಸಿಕೊಟ್ಟಳು. ನನ್ನ ಶಾರದೆಗೆ ಎಷ್ಟೊಂದು ಜನ ಮಕ್ಕಳು! ಅವರೆಲ್ಲ ನನ್ನನ್ನು 'ಅಜ್ಜಿ' ಎಂದು ಕರೆಯುವಾಗ ನನ್ನ ಜೀವಕ್ಕೆ ತಂಪೆರೆದಂತಾಗುವುದು. ಅವರೆಲ್ಲ ಗದ್ದಲ ಮಾಡುತ್ತ ಬಂದು, ಊಟ ಮಾಡುವಾಗ, ಮಾತನಾಡುವಾಗ, ಕಥೆ ಹೇಳುವಾಗ ನನಗೆ ಎಂಥ ಆನಂದವುಂಟಾಗುವುದು, ಅದನ್ನು ಹೇಗೆ ವರ್ಣಿಸಲಿ?' ಎನ್ನುತ್ತಿದ್ದರು. ನನ್ನ ತಾಯಿ ಎಷ್ಟೊಂದು ಆನಂದದಿಂದ ಅವರಿಗೆಲ್ಲ ಲಾಡು-ಕಡಲೆಪುರಿ ತಿನ್ನಲು ಕೊಡುತ್ತಿದ್ದರು, ಹಾಗೂ ಅವರೆಲ್ಲ ಎಷ್ಟು ಖುಷಿಯಿಂದ ಗದ್ದಲ ಮಾಡುತ್ತ ತಿನ್ನುತ್ತಿದ್ದರು! ತಾಯಿ ಅದನ್ನೆಲ್ಲ ಕುಳಿತುಕೊಂಡು ನೋಡುತ್ತ, ನಗುತ್ತಿದ್ದರು. ಆಗ ಅವರ ಮುಖದಲ್ಲಿ ಎಂಥ ತೃಪ್ತಿ ಕಾಣಿಸುತ್ತಿತ್ತು! ಆಗ ಇಷ್ಟೊಂದು ಜನ ಹೆಣ್ಣುಮಕ್ಕಳು ಬರುತ್ತಿರಲಿಲ್ಲ; ಜಯರಾಮಬಾಟಿಗೂ ಹೋಗುತ್ತಿರಲಿಲ್ಲ, ನಿಜ. ಜಯರಾಮಬಾಟಿಗೆ ಹೆಣ್ಣುಮಕ್ಕಳು ಬರಲಾರಂಭಿಸಿದಾಗ ನನ್ನ ತಾಯಿ ತೀರಿಕೊಂಡರು. ಆದರೆ ಅವರು ತೀರಿಕೊಳ್ಳುವ ವೇಳೆಗೆ ನಾನು 'ತಾಯಿ'ಯಾದುದನ್ನು ಕಂಡು ಅವರಿಗೆ ತುಂಬಾ ಆನಂದವಾಗಿಬಿಟ್ಟಿತ್ತಮ್ಮಾ.''

*(ಮುಂದುವರಿಯುವುದು)*